AKSHARASURYA: Peer-Reviewed, Multi Lingual E-Journal. E-ISSN: 2583-620X

# ಕನ್ನಡ ಸಾಹಿತ್ಯಕ್ಕೆ ಮೈಸೂರು ಅರಸರ ಕೊಡುಗೆ

**ಪ್ರಸನ್ನ ಕೆ. ಪಿ.**
ಸಹ ಪ್ರಾಧ್ಯಾಪಕರು
ಕನ್ನಡ ವಿಭಾಗ
ಸರ್ಕಾರಿ ಮಹಿಳಾ ಕಾಲೇಜು
ಹುಣಸೂರು.

**Article Link: https://aksharasurya.com/2024/04/prasanna-k-p.php**

**DOI: https://doi.org/10.5281/zenodo.10929815**

## ABSTRACT:

ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸ ಇರುವ ಕನ್ನಡ ಸಾಹಿತ್ಯವನ್ನು ಆರಂಭದ ಕಾಲದಿಂದಲೂ ಅನೇಕ ರಾಜರು, ರಾಜಮನೆತನಗಳು ಪೋಷಿಸಿ ಪ್ರೋತ್ಸಾಹಿಸಿ ಬೆಳೆಸಿಕೊಂಡು ಬಂದಿವೆ. ಅದರಲ್ಲಿ ಸುಮಾರು ನಾನೂರು ವರ್ಷಗಳಷ್ಟು ಕಾಲ ಆಳ್ವಿಕೆ ಮಾಡಿದ ಮೈಸೂರು ಅರಸರು ಕನ್ನಡ ಸಾಹಿತ್ಯ ಮತ್ತು ಸಂಸ್ಕೃತಿಗೆ ತಮ್ಮದೇ ಆದ ಕೊಡುಗೆಗಳನ್ನು ನೀಡಿರುವುದು ಕಂಡುಬರುತ್ತದೆ. ಇವರ ಕಾಲಘಟ್ಟದಲ್ಲಿ ಅನೇಕ ಕವಿಗಳಿಗೆ, ವಿದ್ವಾಂಸರಿಗೆ, ಭಾಷಾಂತರಕಾರರಿಗೆ ಆಶ್ರಯ ನೀಡಿದ್ದಲ್ಲದೇ, ಅರಸರೇ ಸ್ವತಃ ಕವಿಗಳಾಗಿದ್ದು ಇವರ ಕಾವ್ಯಗಳೇ ಮೈಸೂರು ಅರಸರ ಐತಿಹ್ಯಕ್ಕೆ ಸಾಕ್ಷಿಯಾಗಿವೆ.

ಮೈಸೂರು ಒಡೆಯರಲ್ಲಿ ಪ್ರಪ್ರಥಮವಾಗಿ ಕಾವ್ಯರಚನೆ ಮಾಡಿಸಿದ ಕೀರ್ತಿ ರಾಜ ಒಡೆಯರಿಗೆ ಸಲ್ಲುತ್ತದೆ. ಇವರ ನಂತರ ಬಂದ ಚಾಮರಾಜ ಒಡೆಯರು (1617–1637) 'ಚಾಮರಾಜೋಕ್ತಿ ವಿಲಾಸ' ಮತ್ತು 'ಮಣಿಪ್ರಾಕಾಶ' ವೆಂಬ ಎರಡು ಗ್ರಂಥಗಳನ್ನು ಬರೆಸಿದ್ದಾರೆ. ಚಿಕ್ಕದೇವರಾಜ ಒಡೆಯರು (1672–1704) ಇವರ ಕಾಲವನ್ನ ಕನ್ನಡದ ಸುವರ್ಣಯುಗವೆಂದೆ ಕರೆಯಬಹುದು. ಇವರು ಸ್ವತಃ ಕವಿಗಳಾಗಿದ್ದಲ್ಲದೇ ಅನೇಕ ವಿದ್ವಾಂಸರಿಗೆ ಆಶ್ರಯ ನೀಡಿದ್ದಾರೆ. ಇವರ ಮಂತ್ರಿಮಂಡಲದಲ್ಲಿ ತಿರುಮಲಾರ್ಯ, ವಿಶಾಲಾಕ್ಷ ಪಂಡಿತ, ಚಿಕ್ಕುಪಾಧ್ಯಾಯ, ಕರಣಿಕ ಲಿಂಗಯ್ಯ ಮುಂತಾದವರು ಇದ್ದಂತೆ ಕಂಡುಬರುತ್ತದೆ. 'ಚಿಕ್ಕದೇವರಾಜ ಬಿನ್ನಪ', 'ಗೀತಾಗೋಪಾಲ', 'ಭಾರತ', 'ಭಾಗವತ' 'ಶೇಷಧರ್ಮ' ಮುಂತಾಂದ ಗ್ರಂಥಗಳನ್ನು ಇವರ ಕಾಲದಲ್ಲಿ ರಚನೆಗೊಂಡಿವೆ. ಇವುಗಳನ್ನು ಸ್ವತಃ ತಾವೇ ಬರೆದುದ್ದಾಗಿಯೂ, ಕೆಲವರು ಆಸ್ಥಾನ ಕವಿಗಳು ಅರಸರ ಹೆಸರಿನಲ್ಲಿ ಬರೆದಿರುವುದಾಗಿಯೂ ಅಭಿಪ್ರಾಯ ವ್ಯಕ್ತಪಡಿದ್ದಾರೆ. ಏನೇ ಆಗಿರಲಿ ಕವಿಗಳಿದ್ದುದರಿಂದ ಅವರ ಪ್ರಭಾವದಿಂದಾಗಿ ಈತನೂ ಕೆಲವು ಗ್ರಂಥಗಳನ್ನು ಇಲ್ಲವೇ ಎಲ್ಲ ಗ್ರಂಥಗಳನ್ನೂ ಬರೆದಿರಲು ಸಾಧ್ಯ.

ಇವರ ಆಸ್ಥಾನದಲ್ಲಿ ಮಂತ್ರಿಯೂ, ಕವಿಯೂ ಆಗಿದ್ದ ತಿರುಮಲಾರ್ಯ ಅಪ್ರತಿಮವೀರ ಚರಿತೆ, ಚಿಕ್ಕದೇವರಾಜ ವಿಜಯ, ಚಿಕ್ಕದೇವರಾಜ ವಂಶಾವಳಿ,

ಚಿಕ್ಕದೇವರಾಯ ಶತಕ ಮಂತಾದ ಗ್ರಂಥಗಳನ್ನು ರಚಿಸಿದ್ದಾನೆ.

ಚಿಕ್ಕುಪಾಧ್ಯಾಯ: ಈತ ಅಕ್ಷರಮಾಲಿಕಾ ಸಾಂಗತ್ಯ, ಕಮಲಾಚಲ ಮಹಾತ್ಮ್ಯ, ಅಮರುಶತಕ, ಕಾಮಾಂದಕ ಟೀಕೆ, ಚಿಕ್ಕದೇವರಾಜ ಶೃಂಗಾರ ಪದಗಳು, ಚಿತ್ರಶತಕ ಸಾಂಗತ್ಯ ಮುಂತಾದ 28 ಕೃತಿಗಳನ್ನು ರಚಿಸಿರುವುದು ಕಂಡುಬರುತ್ತದೆ.

ತಿಮ್ಮಕವಿ– ಯಾದವಗಿರಿ ಮಹಾತ್ಮ್ಯೆ, ವೆಂಕಟಗಿರಿ ಮಹಾತ್ಮ್ಯೆ, ಪಶ್ಚಿಮರಂಗ ಮಹಾತ್ಮ್ಯೆ,

ಸಿಂಗರಾರ್ಯ: ಮಿತ್ರವಿಂದ ಗೋವಿಂದ, ಸಂಚಿಹೊನ್ನಮ್ಮ– ಹದಿಬದೆಯಧರ್ಮ, ಮುಮ್ಮಡಿ ಕೃಷ್ಣರಾಜ ಒಡೆಯರ: ಸೌಗಂದಿಕಾ ಪರಿಣಯ, ವತ್ಸರಾಜನ ಕತೆ, ಶಾಂಕುಂತಲ ನಾಟಕ ನವೀನ ಟೀಕೆ, ಪಂಚತಂತ್ರ, ಹರಿಶ್ಚಂದ್ರೋಖ್ಯಾನ, ರಾಮಕಥಾ ಕಲ್ಪವೃಕ್ಷ, ಮುಂತಾದ ಅರವತ್ತಕ್ಕೂ ಎಚ್ಚು ಗ್ರಂಥಗಳನ್ನು ರಚಿಸಿರುತ್ತಾರೆ ಮತ್ತು ಇವರ ಕಾಲದಲ್ಲಿ ನೂರಾರು ಕೃತಿಗಳು ರಚನೆಯಾಗಿವೆ.

ಕೆಂಪುನಾರಾಯಣನ ಮುದ್ರಾಮಂಜೂಷ, ಅಳಿಯ ಲಿಂಗರಾಜನ ನಳಕೂಬರವಿಳಾಸ, ಮತ್ತು ಗಯಾಚರಿತ್ರೆಯನ್ನು ಮಂತಾದ ಕೃತಿಗಳನ್ನು ರಚಿಸಿದ್ದಾನೆ. ಬಸವಪ್ಪಶಾಸ್ತ್ರಿ ಸಾವಿತ್ರಿ ಚರಿತ್ರೆ, ದಮಯಂತಿ ಸ್ವಯಂವರ, ನೀತಿಸಾರ ಸಂಗ್ರಹ, ಶೂರಸೇನಚರಿತ್ರೆ ಮುಂತಾದವುಗಳು. ದೇವಚಂದ್ರನ ರಾಜಾವಳಿಕತೆ ಹೀಗೆ ಮೈಸೂರು ಅರಸ ಕಾಲದಲ್ಲಿ ಸಾವಿರಾರು ಕೃತಿಗಳು ರಚನೆಗೊಂಡಿದ್ದು, ಕನ್ನಡ ಸಾಹಿತ್ಯಕ್ಕೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ.

## KEYWORDS:

ಚಿಕ್ಕದೇವರಾಜ, ಚಿಕ್ಕದೇವರಾಜ ಬಿನ್ನಪ, ಗೀತಾಗೋಪಾಲ, ಭಾರತ, ಭಾಗವತ, ಶೇಷಧರ್ಮ.

**ಚಿಕ್ಕದೇವರಾಜ ಒಡೆಯರ್:** ಇವರ ಕಾಲ ಕನ್ನಡದ ಸುವರ್ಣಯುಗವೆಂದು ಕರೆಯಬಹುದು. ಸ್ವತಃ ಚಿಕ್ಕದೇವರಾಜ ಒಡೆಯರ್ ಉತ್ತಮ ಕವಿಗಳು. ಕವಿಗಳಾಗಿದ್ದುದಲ್ಲದೆ ತಮ್ಮ ಆಸ್ಥಾನದಲ್ಲಿ ಅನೇಕ ವಿದ್ವಾಂಸರಿಗೆ ಆಶ್ರಯ ಕೊಟ್ಟಿದ್ದರು. ಇವರ ಮಂತ್ರಿಮಂಡಲದಲ್ಲಿ ತಿರುಮಲಾರ್ಯ, ವಿಶಾಲಾಕ್ಷ ಪಂಡತ, ಚಿಕ್ಕುಪಾಧ್ಯಾಯ, ಕರಣಿಕಲಿಂಗಯ್ಯ, ಮುಂತಾದವರು ಮಂತ್ರಿಗಳಾಗಿದ್ದರು.

ಚಿಕ್ಕದೇವರಾಜ ಒಡೆಯರು ರಚಿಸಿರು ಮುಖ್ಯವಾದ ಗ್ರಂಥಗಳೆಂದರೇ, ಚಿಕ್ಕದೇವರಾಜಬಿನ್ನಪ, ಗೀತಾಗೋಪಾಲ, ಭಾರತ, ಭಾಗವತ, ಶೇಷಧರ್ಮ ಮುಂತಾದ ಗ್ರಂಥಗಳನ್ನು ಬರೆದಿದ್ದಾರೆ. ಇವುಗಳನ್ನು ಸ್ವತಹ ತಾನೇ ಬರೆದುದ್ದಾಗಿಯೂ ಕೆಲವರು ಅವನ ಆಸ್ಥಾನದ ಕವಿಗಳು ಅವನ ಹೆಸರಿನಲ್ಲಿ ಬರೆದು ಅಭಿಪ್ರಾಯ ಪಡುತ್ತಾರೆ. ಏನೇ ಆಗಿರಲಿ ಕವಿಗಳಾದುದರಿಂದ ಅವರ

ಪ್ರಭಾವದಿಂದಾಗಿ ಈತನು ಕೆಲವು ಗ್ರಂಥಗಳನ್ನು ಇಲ್ಲವೇ ಎಲ್ಲಾ ಗ್ರಂಥಗಳನ್ನು ಬರೆದಿರಲು ಸಾಧ್ಯ.

**ಚಿಕ್ಕದೇವರಾಜ ಬಿನ್ನಪ:** ಈ ಕೃತಿಯಲ್ಲಿ ಚಿಕ್ಕದೇವರಾಜರು ಚೆಲುವನಾರಾಯಣನಲ್ಲಿ ಮಾಡಿಕೊಂಡ ಮೂವತ್ತು ಬಿನ್ನಪಗಳಿವೆ. ತನ್ನ ಪ್ರಜೆಗಳ ಬಗ್ಗೆ ಅವನಿಗಿದ್ದ ಅನುಕಂಪ ಮತ್ತು ಅವರ ಶ್ರೇಯೋಭಿವೃದ್ಧಿಯನ್ನು ಬಯಸುವ ಹಿರಿಯ ಗುಣ ಇದ್ದುದ್ದನ್ನು ಇಲ್ಲಿ ಕಾಣಬಹುದು. ಇಲ್ಲಿ ಒಂದೊಂದು ಭಿನ್ನಪದ ಆದಿಯಲ್ಲಿಯೂ ಒಂದೊಂದು ಕಂದ ಪದ್ಯಗಳಿದ್ದು ಗದ್ಯವು ಹಳಗನ್ನಡದ ಶೈಲಿಯಲ್ಲಿದೆ. ಕಾವ್ಯವಾದ್ದರಿಂದ ಬಹುಶಃ ಆಡುಮಾತು ಬಳಸದೆ ಹಳಗನ್ನಡ ಪ್ರೌಢಗದ್ಯವನ್ನು ಬಳಸಿದಂತೆ ಕಂಡುಬರುತ್ತದೆ.

**ಭಾಗವತ:** ಸಂಸ್ಕೃತದ ಭಾಗವತಕ್ಕೆ ಕನ್ನಡದಲ್ಲಿ ಟೀಕುಗಳನ್ನು ಬರೆಯಲಾಗಿದೆ.

**ಭಾರತ:** ಶಾಂತಿ ಪರ್ವದಿಂದ ಮುಂದಿನ ಪರ್ವಗಳಿಗೆ ಕನ್ನಡದಲ್ಲಿ ಟೀಕೆಗಳನ್ನು ಬರೆಯಲಾಗಿದೆ.

**ಶೇಷಧರ್ಮ:** ಇದು ಸಹ ಸಂಸ್ಕೃತದ ಶೇಷಧರ್ಮದ ಕನ್ನಡದ ಟೀಕೆಯಾಗಿದೆ.

**ಗೀತಗೋಪಾಲ:** ಇದು ಜಯದೇವನ ಗೀತಾಗೋವಿಂದದಂತೆ ಕೀರ್ತನೆಗಳ ರೂಪದಲ್ಲಿ ಬರೆಯಲಾಗಿದೆ. ಇದರಲ್ಲಿ ಪೂರ್ವಭಾಗ ಮತ್ತು ಉತ್ತರಭಾಗಗಳೆಂಬ ಎರಡು ಭಾಗಗಳಿವೆ. ಪ್ರತಿ ಭಾಗದಲ್ಲಿಯೂ ಏಳು ಖಂಡಗಳಿವೆ. ಪ್ರತಿ ಖಂಡದಲ್ಲಿ ಏಳು ಪದಗಳು ಇವೆ. ಇದಕ್ಕೆ ಸಪ್ತಪದಿ ಎಂಬ ಹೆಸರು ಉಂಟು. ಇದರಲ್ಲಿ ಇವನ ಆಸ್ಥಾನ ಕವಿಯಾದ ತಿರುಮಲರ್ಯನು ಬರೆದ ಅಪ್ರತಿಮ ವೀರಚರಿತೆ ಮತ್ತು ಚಿಕ್ಕದೇವರಾಜವಿಜಯ ಗ್ರಂಥಗಳ ಬಹುಪಾಲು ಪದ್ಯಗಳು ದೊರೆತಿರುವುದ ರಿಂದ ತಿರುಮಲಾರ್ಯನೇ ಈ ಗ್ರಂಥವನ್ನು ಬರೆದು ತನ್ನ ಪ್ರಭುವಿನ ಹೆಸರಿನಲ್ಲಿ ಪ್ರಕಟಿಸಿರಬೇಕೆಂದು ತೋರುತ್ತದೆ.

**ಮುಮ್ಮಡಿ ಕೃಷ್ಣರಾಜ ಒಡೆಯರ್:** ಕ್ರಿ.ಶ1794 ರಿಂದ 1868 ರವರೆಗೆ ಆಳ್ವಿಕೆ ಮಾಡಿದ ಇವರು ತನ್ನ ಐದನೇ ವಯಸ್ಸಿನಲ್ಲಿ ದೊರೆಯಾದರು. ಇವರು ಅಧಿಕಾರ ವಹಿಸಿಕೊಂಡಾಗ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರ್ ಸಾಹಿತ್ಯ ಸೇವೆಗೆ ತೊಡಗಿ ತಮಗೆ ರಾಜಕಾರಣದಲ್ಲಿ ಉಂಟಾಗಿದ್ದ ನೋವನ್ನು ಮರೆತರು. 60ಕ್ಕಿಂತಲೂ ಹೆಚ್ಚು ಗ್ರಂಥ ರಚನೆ ಮಾಡಿದರು. ಇವರಿಗೆ ಕನ್ನಡ, ಸಂಸ್ಕೃತ, ತೆಲುಗು, ಪರ್ಷಿಯನ್ ಭಾಷೆಗಳಲ್ಲಿ ಅಪಾರ ಜ್ಞಾನವಿತ್ತು. ಇವರ ನೇತೃತ್ವದಲ್ಲಿ ಕನ್ನಡದಲ್ಲಿ ನಾನಾ ಪ್ರಕಾರಗಳಲ್ಲಿ ಸಾಹಿತ್ಯ ಸೃಷ್ಟಿಯಾಯಿತು.

ವಿದ್ವಾಂಸರಿಗೆ ಆಶ್ರಯದಾತರಾಗಿದ್ದು ಅವರಿಂದ ನೂರಾರು ಗ್ರಂಥಗಳನ್ನು ರಚನೆ ಮಾಡಿಸಿದುದಲ್ಲದೆ ತಾವೂ ಸಹ 60 ಕ್ಕಿಂತಲೂ ಹೆಚ್ಚು ಗ್ರಂಥಗಳನ್ನು ರಚಿಸಿದರು. ಇವರು ಇಷ್ಟೇ ಗ್ರಂಥಗಳನ್ನು ರಚಿಸಿರುವುದಾಗಿ ನಿರ್ದಿಷ್ಟವಾಗಿ ಹೇಳಲು ಬರುವುದಿಲ್ಲ ಇವರು ಬರೆದ ಸಾಹಿತ್ಯ ಪ್ರಕಾರಗಳನ್ನು ಹೀಗೆ ವಿಂಗಡಿಸಬಹುದು.

**ಗದ್ಯಸಾಹಿತ್ಯ:** ಗದ್ಯ ಸಾಹಿತ್ಯಕ್ಕೆ ರಾಜರ ಕಾಲ ಒಂದು ಸುವರ್ಣ ಯುಗ. ನೂರಾರು ಗದ್ಯ ಗ್ರಂಥಗಳು ರಚಿತವಾದವು. ಇವರೇ ಅನೇಕ ಗದ್ಯ ಗ್ರಂಥಗಳನ್ನು ಬರೆದು ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತ ಗೊಳಿಸಿದರು.

**ಸೌಗಂಧಿಕಾ ಪರಿಣಯ:** ಈ ಗ್ರಂಥವು 33 ಅಧ್ಯಾಯಗಳುಳ್ಳ ಒಂದು ದೊಡ್ಡ ಗದ್ಯಕೃತಿ. ಇದೇ ಹೆಸರಿನ ಪದ್ಯ ಗ್ರಂಥವನ್ನೂ ಬರೆದಿದ್ದಾರೆ. ಇದರಲ್ಲಿ ನೂರು ಸಂಧಿಗಳು 6040 ಭಾಮಿನಿ ಷಟ್ಪದಿಯ ಪದ್ಯಗಳೂ ಇವೆ. ಇದೊಂದು ಕುತೂಹಲಕರವಾದ ಕಥೆ. ಇದರಲ್ಲಿ ಪುರಾಣ ಮತ್ತು ಇತಿಹಾಸಗಳೆರಡೂ ಸಂಗಮಿಸಿರುವುದೊಂದು ವಿಶೇಷ. ಇದರಲ್ಲಿ ಸುಗಂಧರಾಜನ ಸಾಹಸದ ಕಥೆ ಯನ್ನು ನಿರೂಪಿಸಲಾಗಿದೆ.

**ವತ್ಸರಾಜನ ಕಥೆ:** ಇದು 70 ಗುಚ್ಛಗಳುಳ್ಳ ಒಂದು ದೊಡ್ಡ ಕಥಾಗ್ರಂಥ. ಇದಕ್ಕೆ ಶ್ರೀ ಕೃಷ್ಣರಾಜ ಸೂಕ್ತ ಮುಕ್ತಾವಳಿ ಎಂಬ ಹೆಸರೂ ಉಂಟು, ಸಂಸ್ಕೃತದಲ್ಲಿ ನಾಟಕ ರೂಪದಲ್ಲಿರುವ ವತ್ಸರಾಜನ ಕಥೆಯನ್ನು ಈತ ಗದ್ಯರೂಪದಲ್ಲಿ ಬರೆದಿದ್ದಾನೆ. ಇಲ್ಲಿಯ ಭಾಷೆ ಸರಳ ಮತ್ತು ಸುಲಭವಾಗಿದೆ. ಇದರಲ್ಲಿ ಅಷ್ಟಾದಶ ವರ್ಣನೆಗಳು ಬಂದಿವೆಯಾದರೂ ಸರಳವಾಗಿವೆ.

**ಶಾಕುಂತಲ ನಾಟಕ ನವೀನ ಟೀಕೆ:** ಕಾಳಿದಾಸನ ಸಂಸ್ಕೃತ ನಾಟಕದ ನವೀನ ಟೀಕೆ ಈ ಗ್ರಂಥಕ್ಕೆ ಕೃಷ್ಣರಾಜ ವಿಲಾಸ ರತ್ನಾಕರ ಎಂಬ ಹೆಸರು ಇದೆ. ಇದರಲ್ಲಿ ದೀರ್ಘವಾದ ವಾಕ್ಯಗಳು ಹೇರಳವಾಗಿವೆ.

**ಪಂಚತಂತ್ರ:** ಮಕ್ಕಳಿಗಾಗಿ ಈ ಗ್ರಂಥವನ್ನು ಬರೆದಿದ್ದಾಗಿ ಹೇಳಿಕೊಂಡಿದ್ದಾನೆ. ಇವನು ವಿಷ್ಣುಶರ್ಮನನ್ನು ಅನುಸರಿಸಿಲ್ಲ. ವಿಕ್ರಮೋರ್ವಶೀಯ ಮತ್ತು ಮಾಳವಿಕಾಗ್ನಿಮಿತ್ರ ನಾಟಕಗಳನ್ನು ಕನ್ನಡದಲ್ಲಿ ಬರೆದಿದ್ದಾನೆ. ಇವು ಗದ್ಯ ರೂಪದಲ್ಲಿವೆ ಮಾಳವಿಕಾಗ್ನಿ ಮಿತ್ರ ನಾಟಕಕ್ಕೆ ಕೃಷ್ಣರಾಜ ವಾಣಿವಿಲಾಸ ರತ್ನಾಕರ ಎಂಬ ಹೆಸರು ಇದೆ.

**ಹರಿಶ್ಚಂದ್ರೋಪಾಖ್ಯಾನ:** ಭಾರತದ ಅರಣ್ಯ ಪರ್ವದಲ್ಲಿರುವ ಕಥೆಯೇ ಇದಕ್ಕೆ ಆಧಾರ.

**ರಾಮಕಥಾಕಲ್ಪವೃಕ್ಷ:** ಇದೊಂದು ಗದ್ಯಗ್ರಂಥ ರಾಮಾಯಣ ಧರ್ಮೋತ್ತರಪುರಾಣ, ವಿಷ್ಣುಪುರಾಣ, ಶಿವವಿಷ್ಣುಪುರಾಣ, ಪದ್ಮಪುರಾಣ, ಕೂರ್ಮ ಪುರಾಣ, ಜೈಮಿನಿ ಮುಂತಾದ ಗ್ರಂಥಗಳಲ್ಲಿರುವ ರಾಮನ ಕಥೆಯನ್ನು ಇದರಲ್ಲಿ ಹೇಳಲಾಗಿದೆ. ಪ್ರತಿಯೊಂದು ಸ್ತಬಕದಲ್ಲಿಯೂ ಶ್ರೀ ಕೃಷ್ಣರಾಜ ಮಹಾರಾಜ ಕಂಠೀರವರಿಂದ ಪ್ರಕಾಶಿತವಾದ ಸರ್ವಸಾರಸಂಗ್ರಹ ಶ್ರೀರಾಮ ಕಥಾಕಲ್ಪವೃಕ್ಷವೆಂಬ ಗ್ರಂಥದೊಳ್ ಎಂದು ಹೇಳಿದ್ದಾನೆ.

**ಶ್ರೀ ಕೃಷ್ಣ ಕಥಾ ರತ್ನಾಕರ:** ಭಾಗವತ, ವಿಷ್ಣು ಪುರಾಣ, ಹರಿವಂಶ, ಭಾರತ ಮುಂತಾದ ಗ್ರಂಥಗಳೆಲ್ಲವನ್ನು ಅಭ್ಯಾಸ ಮಾಡಿ ಅವುಗಳಲ್ಲಿ ಬರುವ ಶ್ರೀಕೃಷ್ಣನ ಕಥೆಯ ಸಾರಸಂಗ್ರಹವನ್ನು ಇದರಲ್ಲಿ ಹೇಳಿದ್ದಾನೆ. ಭಾಷೆ ಸುಲಭವೂ ಸರಳವೂ ಆಗಿದೆ ಈ ಗ್ರಂಥವು ಶ್ರೀ ಕೃಷ್ಣನ ಕಥೆಯನ್ನು ಓದಲು ಕುತೂಹಲವನ್ನು ಕೆರಳಿಸುತ್ತದೆ.

**ಶ್ರೀ ಕೃಷ್ಣ ಕಥಾ ಸಾರಸಂಗ್ರಹ:** ಇದನ್ನು ಉತ್ಪತ್ತಿಕಾಂಡ, ವಿಲಾಸಕಾಂಡ, ಕಲ್ಯಾಣಕಾಂಡ, ಸಂತಾನಕಾಂಡ, ಅವತಾರಕಾಂಡವೆಂದು ಐದು ಭಾಗಗಳಾಗಿ ವಿಂಗಡಿಸಲಾಗಿದೆ. ಇದಕ್ಕೆ ಪದ್ಮಪುರಾಣ, ಮಾರ್ಕಂಡೇಯ ಪುರಾಣ, ವಿಷ್ಣು ಪುರಾಣ ಮುಂತಾದ ಕೃತಿಗಳು ಆಕರವಾಗಿವೆ.

**ಆಧ್ಯಾತ್ಮ ರಾಮಾಯಣ:** ಇದಕ್ಕೆ ಆಕರ ಬ್ರಹ್ಮಾಂಡ ಪುರಾಣ, ಉಮಾ ಮಹೇಶ್ವರರ ಸಂಭಾಷಣ ರೂಪದಲ್ಲಿದೆ. ಇದರಲ್ಲಿ ಮೈಸೂರು ರಾಜರ ವಂಶ ಚರಿತ್ರೆ ಇದೆ. ಇದರಲ್ಲಿ ಏಳು ಕಾಂಡಗಳು 60 ಸರ್ಗಗಳು ಇವೆ. ಇದರಲ್ಲಿ 8500 ಗ್ರಂಥ ಸಂಖ್ಯೆಗಳಿವೆ.

**ಭಾರತ:** ಇದಕ್ಕೆ ವಾಣಿವಿಲಾಸ ಭಾರತ ಎಂಬ ಹೆಸರು ಇದೆ. ಇದರಲ್ಲಿ ಶ್ರೀಕೃಷ್ಣ ಸಂಧಾನ ದಿಂದ ದ್ರೋಣಪರ್ವ ದವರೆಗಿನ ಕಥೆ ಇದೆ.

**ರಾಮಾಯಣ ತಾತ್ಪರ್ಯ ದೀಪಿಕಾ ಟೀಕೆ:** ನಾನಾ ಗ್ರಂಥಗಳಲ್ಲಿ ಮಾಡಿರುವ ಟೀಕೆಯನ್ನು ಆಧರಿಸಿ ಈ ಗ್ರಂಥವನ್ನು ರಚಿಸಲಾಗಿದೆ. ವಾಲ್ಮೀಕಿ ಗೂಢವಾಗಿ ಹೇಳಿರುವ ವಿಚಾರವನ್ನು ಇದರಲ್ಲಿ ಸರಳವಾಗಿ ಹೇಳಲಾಗಿದೆ.

**ಶ್ರೀಮದ್ ಭಾಗವತ ಕನ್ನಡದ ಟೀಕು:** ಇದರಲ್ಲಿ 90 ಅಧ್ಯಾಯಗಳಿವೆ. ಶ್ರೀ ಕೃಷ್ಣ ವಾಣಿವಿಲಾಸವೆಂಬ ಕನ್ನಡದ ಟೀಕು ಇದೆ. ಕೃಷ್ಣ ಚರಿತ್ರೆ ಇದರ ಕಥಾ ವಸ್ತು. ಇಲ್ಲಿಯ ಗದ್ಯ ಆಡಂಬರದಿಂದ ಕೂಡಿರದೆ ಸರಳವಾಗಿದೆ.

**ಗಯಾ ಚರಿತ್ರೆಯ ಟೀಕು:** ಗಯನೆಂಬ ಗಂಧರ್ವನು ಶ್ರೀಕೃಷ್ಣನಿಗೆ ಮಾಡಿದ ಅಪಮಾನಕ್ಕಾಗಿ ಹೆದರಿ ಅರ್ಜುನನ ಮೊರೆ ಹೋಗುತ್ತಾನೆ. ಅರ್ಜುನನ ರಕ್ಷಣೆ

ಈತನಿಗೆ ದೊರೆಯುತ್ತದೆ.

**ಸಿರಿ ನಂಜುಂಡ ಶತಕ:** ಇದರಲ್ಲಿ ಒಂದು ವೃತ್ತ 13 ಕಂದಪದ್ಯಗಳಿದ್ದು ಪ್ರತಿ ಪದ್ಯದ ಕಡೆಯಲ್ಲಿ ಸಿರಿನಂಜುಂಡ ಎಂಬ ಅಂಕಿತವಿದೆ. ಇದರಲ್ಲಿ ಶಿವನ 24 ಲೀಲಾ ವಿನೋದಗಳನ್ನು ಹೇಳಲಾಗಿದೆ.

**ಲಲಿತೋಪಾಖ್ಯಾನ:** ಬ್ರಹ್ಮಾಂಡ ಪುರಾಣದ ಉತ್ತರ ಭಾಗದ ಕಥೆ ಇದರಲ್ಲಿದೆ.

**ಶ್ರೀ ತತ್ವ ನಿಧಿ:** ಇದರಲ್ಲಿ ಒಂಬತ್ತು ನಿಧಿಗಳನ್ನು ಹೇಳಲಾಗಿದೆ ಶಕ್ತಿ ನಿಧಿ, ವಿಷ್ಣುನಿಧಿ, ಶಿವನಿಧಿ, ಬ್ರಹ್ಮನಿಧಿ, ಗ್ರಹ ನಿಧಿ, ವೈಷ್ಣವ ನಿಧಿ, ಶೈವನಿಧಿ, ಆಗಮ ನಿಧಿ, ಗೌತುಕ ನಿಧಿ, ಸಂಸ್ಕೃತದ ಮೂಲ ಪ್ರತಿಯಲ್ಲಿ 4000 ವರ್ಣ ಚಿತ್ರಗಳಿವೆ. ಈ ಗ್ರಂಥದಿಂದ ಕೃಷ್ಣರಾಜನಿಗೆ ಮರಾಠಿ ಮತ್ತು ಸಂಸ್ಕೃತ ಭಾಷೆಗಳೆರಡರಲ್ಲೂ ಪಾಂಡಿತ್ಯವಿದ್ದುದು ತಿಳಿದುಬರುತ್ತದೆ.

**ಸಂಖ್ಯಾರತ್ನಮಾಲ:** ಇದರಲ್ಲಿ ತ್ರಿಮೂರ್ತಿಗಳು, ಗುಣತ್ರಯ, ತ್ರಿಲೋಕ ಚತುಷ್ಟಯ, ಪಂಚಪ್ರಾಣ, ಪಂಚಮಹಾಪಾತಕಗಳು, ಪಂಚೇಂದ್ರಿಯಗಳು, ಹ ರಿಷಡ್ವರ್ಗಗಳು, ಸಪ್ತಸಾಗರಗಳು, ಅಷ್ಟದಿಗ್ಗಜಗಳು, ನವರತ್ನಗಳು ದಶ ದಿಕ್ಕುಗಳು ಹೀಗೆ 120 ಸಂಖ್ಯೆಗಳ ವಿವರಣೆ ಇದೆ.

ಭರತಸಾರ ಸಂಗ್ರಹ ಟೀಕೆ ಇದರಲ್ಲಿ ಸಂಗೀತ ಮತ್ತು ನಾಟ್ಯಕ್ಕೆ ಸಂಬಂಧಿಸಿದ ವಿಷಯಗಳನ್ನು ಹೇಳಲಾಗಿದೆ.

**ಚಾಮುಂಡಿಕ ನಿಘಂಟು:** ಇದೊಂದು ಕೋಶಗ್ರಂಥ. ಇದರಲ್ಲಿ ಮೂರು ಪ್ರಕರಣಗಳಿದ್ದು 1,236 ಪದಾರ್ಥಗಳಿಗೆ ಅರ್ಥ ಬರೆಯಲಾಗಿದೆ. ಇದಕ್ಕಾಗಿ 147 ಶ್ಲೋಕಗಳನ್ನು ರಚಿಸಲಾಗಿದೆ. ಇದರಿಂದ ಕೆಲವು ಶ್ಲೋಕಗಳನ್ನು ಉದಾಹ ರಿಸಲಾಗಿದೆ.

**ಅನುಭವ ಪಂಚ ರತ್ನ:** ಐದು ಹಾಡುಗಳಿಂದ ಕೂಡಿದ ಒಂದು ಪುಟ್ಟ ಗ್ರಂಥ. ಮುಮ್ಮಡಿ ಕೃಷ್ಣರಾಜನಿಗಿದ್ದ ಆಸೆಯೆಂದರೆ ತನಗೆ ಚೆನ್ನಾಗಿ ಕಂಡ ಸಾಹಿತ್ಯವನ್ನೆಲ್ಲ ಕನ್ನಡಕ್ಕೆ ತರಬೇಕೆಂಬುದು. ಇಂದ್ರಾಕ್ಷಿಸ್ತೋತ್ರ, ಅಭಿಚಾರಕ ಮಂತ್ರವನ್ನು ಕನ್ನಡ ಗದ್ಯದಲ್ಲಿ ತಂದಿದ್ದು ಅಭಿಚಾರಕ ಮಂತ್ರದ ಗದ್ಯ ಹೀಗಿದೆ 'ದುಷ್ಟಮೃಗಗಳ ಬಾಯಂ ಕಟ್ಟು, ಆನೆಯ ಕಟ್ಟು, ಹುಲಿಯಂ ಕಟ್ಟು, ಕಾಳಿ ಓಂ ಕಾಳಿ ಮಹಾಕಾಳಿ ಭದ್ರಕಾಳಿ ಹಾವ ಹೆಡೆಯಂ ಮೆಟ್ಟು, ಭೂತ ಪ್ರೇತ ಪಿಶಾಚ ಶಾಕಿನಿ ಡಾಕಿನಿಯಂ ಮೆಟ್ಟು, ಮೆಟ್ಟದೆ ತಪ್ಪಿದರೆ ಶಿವನಾಣೆ ಗುರುಪಾದದಾಣೆ, ಕೃಷ್ಣ ಭೂಪಾಲನಂ ಪೊರೆವ ಚಾಮುಂಡಿಕಾದೇವಿಯಾಣೆ, ಎಂದಿದೆ.

ಈತನ ಪ್ರತಿಭೆ ಅಪಾರವಾದದ್ದು ಕನ್ನಡ ಭಾಷೆಯ ಮೇಲಿನ ಪ್ರೇಮ ಅಗಾಧ. ಎಲ್ಲಾ ಪ್ರಕಾರಗಳಲ್ಲಿಯೂ ಈತ ಕೈಯಾಡಿಸಿದ್ದಾನೆ. ರಾಜ್ಯದ ಆಡಳಿತ ಸೂತ್ರವನ್ನು ಹಿಡಿದು ಶಕ್ತ ಆಡಳಿತಗಾರರು ಎನೆಸಿಕೊಂಡು ಇಷ್ಟೊಂದು ವಿಫಲವಾಗಿ ಸಾಹಿತ್ಯ ರಚನೆ ಮಾಡಿರುವುದು ಆಶ್ಚರ್ಯವನ್ನುಂಟು ಮಾಡುತ್ತದೆ. ಸಾಹಿತ್ಯ ರಚನೆಯಲ್ಲಿ ಈತನದು ದೈತ್ಯ ಶಕ್ತಿ ಇವನ ಗದ್ಯದಲ್ಲಿ ವೈವಿಧ್ಯತೆ ಇದೆ. ಆಧುನಿಕ ಕನ್ನಡ ಸಾಹಿತ್ಯಕ್ಕೆ ಇದೊಂದು ಮೈಲುಗಲ್ಲು. ಇವನನ್ನು ಕನ್ನಡ ಗದ್ಯಸಾಹಿತ್ಯದ ಸಾರ್ವಭೌಮನೆಂದು ಕರೆದು ಗೌರವಿಸಿದ್ದಾರೆ. ಇವನ ಆಸ್ಥಾನದಲ್ಲಿ ಅನೇಕ ಜನ ವಿದ್ವಾಂಸರಿದ್ದು ಅವರಿಗೆ ಅನೇಕ ಗ್ರಂಥಗಳನ್ನು ರಚಿಸಲು ಪ್ರೋತ್ಸಾಹ ಕೊಟ್ಟನು.

ಹೀಗೆ ಮೈಸೂರು ಅರಸರು ತಮ್ಮ ಆಡಳಿತದ ಕಾಲಾವಧಿಯಲ್ಲಿ ಅನೇಕ ಕವಿಗಳಿಗೆ ವಿದ್ವಾಂಸರಿಗೆ ರಾಜಾಶ್ರಯ ನೀಡಿ ಕನ್ನಡ ಸಾಹಿತ್ಯ ಬೆಳಸಿದ್ದಲ್ಲದೆ ಹೆಚ್ಚಾಗಿ ತಾವೇ ಕವಿಗಳಾಗಿ, ಬರಹಗಾರರಾಗಿ ಕನ್ನಡ ಸಾಹಿತ್ಯವನ್ನು ಶ್ರೀಮಂತ ಗಳಿಸಿದ್ದಾರೆ.

**ಆಕರ ಗ್ರಂಥ:**

1. ನಂಜೇಗೌಡ ಎಚ್. (1995). ಕನ್ನಡ ಸಾಹಿತ್ಯ ಚರಿತ್ರೆ. ಚೇತನಾ ಮಸ್ತಕಾಲಯ. ಮೈಸೂರು.

**ಪರಾಮರ್ಶನ ಗ್ರಂಥಗಳು:**

1. ಮುಗಳಿ ರಂ. ಶ್ರೀ. (1999). ಕನ್ನಡ ಸಾಹಿತ್ಯ ಚರಿತ್ರೆ. ಗೀತಾ ಬುಕ್ ಹೌಸ್. ಮೈಸೂರು.
2. ಪಾಲಾಕ್ಷ. (2019). ಸಮಗ್ರ ಕರ್ನಾಟಕ ಇತಿಹಾಸ. ಶಶಿ ಪ್ರಕಾಶನ. ತುಮಕೂರು.
3. ಸದಾಶಿವ ಕೆ. (2000). ಕರ್ನಾಟಕ ಪ್ರೌಢ ಇತಿಹಾಸ. ಪ್ರಿಯದರ್ಶಿನಿ ಪ್ರಕಾಶನ. ಮೈಸೂರು.